<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 29-08-2022.**</u>

**ಪಾಟೀ ಸವಾಲು - 11 ನೇ ಪ್ರತಿವಾದಿ ಪರ ವಕೀಲರಿಂದ**

8) ನಾನು ತಹಶೀಲ್ದಾರರ ಬಳಿ ಖಾತೆ ಮಾಡಿಸಿಕೊಳ್ಳಲು ಹೋದಾಗ ನನಗೆ 11 ನೇ ಪ್ರತಿವಾದಿಗೆ ಕ್ರಯಪತ್ರವಾಗಿದೆ ಎಂದು ಗೊತ್ತಾಯಿತು. ನನಗೆ ಆ ಸಮಯದಲ್ಲೇ ದಾವಾ ಸ್ವತ್ತಿನ ಬಗ್ಗೆ 11 ನೇ ಪ್ರತಿವಾದಿಗೆ ಯಾರು ಕ್ರಯಪತ್ರ ಮಾಡಿಕೊಟ್ಟರು ಎಂಬ ಬಗ್ಗೆ ಗೊತ್ತಾಗಿತ್ತು ಎಂದರೆ ಸರಿ. ನಾನು ಅದರ ಬಗ್ಗೆ 1 ರಿಂದ 9 ನೇ ಪ್ರತಿವಾದಿಗಳನ್ನು ಸಂಪರ್ಕಿಸಿ 11 ನೇ ಪ್ರತಿವಾದಿಗೆ ಕ್ರಯಪತ್ರ ಮಾಡಿಕೊಟ್ಟ ಬಗ್ಗೆ ಕೇಳಲಿಲ್ಲವೇ? ಎಂದರೆ ಕೇಳಿದೆ, ಅದಕ್ಕೆ 1 ರಿಂದ 9 ನೇ ಪ್ರತಿವಾದಿಗಳು ಕ್ರಯಪತ್ರ ಮಾಡಿಕೊಟ್ಟಿಲ್ಲವೆಂದು ಹೇಳಿದರು. ನನ್ನ ಗಮನಕ್ಕೆ ಬಂದ ನಂತರ 11 ನೇ ಪ್ರತಿವಾದಿಗೆ ಖಾತೆ ಮಾಡಬಾರದು ಎಂದು ನಾನು ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅಪೀಲು ವಜಾ ಆಗಿದೆ ಎಂದರೆ ಇಲ್ಲ, ವಿಚಾರಣೆಗೆ ಬಾಕಿ ಇರುತ್ತದೆ. ನಾನು ಹಾಕಿದ್ದ ಕಂದಾಯ ಅಪೀಲು ವಜಾ ಅಗಿದೆ ಎಂದರೆ ದಾಖಲೆ ನೋಡಿ ಹೇಳಬೇಕು. ಈ ದಾವೆಗೆ 1 ರಿಂದ 9 ನೇ ಪ್ರತಿವಾದಿಗಳು ಪ್ರತಿವಾದ ಪತ್ರವನ್ನು ಸಲ್ಲಿಸಿದ್ದಾರೆಯೇ? ಎಂದರೆ ಸಲ್ಲಿಸಿಲ್ಲ, ಮುಂದೆ ಸಲ್ಲಿಸುತ್ತಾರೆ. 1 ರಿಂದ 9 ನೇ ಪ್ರತಿವಾದಿಗಳು ಅವರು ಜಿ.ಪಿ.ಎ. ಬರೆದುಕೊಡದೇ ಇದ್ದರೂ 10 ನೇ ಪ್ರತಿವಾದಿ ಜಿ.ಪಿ.ಎ. ಮೂಲಕ 11 ನೇ ಪ್ರತಿವಾದಿಗೆ ಕ್ರಯಪತ್ರ ಮಾಡಿಕೊಟ್ಟಿದ್ದಾರೆಂದು ಆಪಾದಿಸಿ ಬೇರೆ ದಾವೆ ಸಲ್ಲಿಸಿದ್ದಾರೆಯೇ? ಎಂದರೆ ಸಲ್ಲಿಸಿಲ್ಲ. ನನಗೆ ಕ್ರಯಪತ್ರ ಆಗುವ ಮುಂಚೆಯೇ 11 ನೇ ಪ್ರತಿವಾದಿಗೆ ಕ್ರಯಪತ್ರವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. 11 ನೇ ಪ್ರತಿವಾದಿಗೆ ದಿ.09-01-2006 ರಂದು ಕ್ರಯಪತ್ರವಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ದಿ.10-04-2006 ರಂದು ಕ್ರಯಪತ್ರ ನೋಂದಣೆ ಮಾಡಿಸಿಕೊಳ್ಳುವ ಮುಂಚೆ

ದಾವಾ ಸ್ವತ್ತಿನ ಋಣಭಾರ ಪ್ರಮಾಣ ಪತ್ರವನ್ನು ಪಡೆದು ಪರಿಶೀಲನೆ ಮಾಡಿರಲಿಲ್ಲ. 1 ರಿಂದ 9 ನೇ ಪ್ರತಿವಾದಿಗಳು 10 ನೇ ಪ್ರತಿವಾದಿಗೆ ಜಿ.ಪಿ.ಎ. ಮಾಡಿಕೊಡದೇ ಇದ್ದಲ್ಲಿ ಅವರು ಇಲ್ಲಿಯವರೆಗೆ 10 ನೇ ಪ್ರತಿವಾದಿ ವಿರುದ್ಧ ಯಾಕೆ ಕಾನೂನು ಕ್ರಮ ಕೈಗೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ. 11 ನೇ ಪ್ರತಿವಾದಿ ನನಗಿಂತ ಮುಂಚೆಯೇ ಕ್ರಯಪತ್ರ ಪಡೆದುಕೊಂಡಿರುವ ಕಾರಣಕ್ಕೆ ಅವರೇ ಹಕ್ಕು, ಅಧಿಕಾರ ಹೊಂದಿದ್ದಾರೆ ಎಂದರೆ ಸರಿಯಲ್ಲ. ಆ ವಿಚಾರ ಗೊತ್ತಿದ್ದರೂ 11 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಕ್ರಯಪತ್ರ ಮಾಡಿಸಿಕೊಂಡು ಈ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲಾ.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**